# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಗುಬ್ಬಿ

ಉಪಸ್ಥಿತರು :- **ಶ್ರೀ ಕಿರಣ್ ಎಸ್.ಪಿ.,** ಬಿ.ಬಿ.ಎಂ., ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಗುಬ್ಬಿ.

**ದಿನಾಂಕ 6ನೇ ಆಗಸ್ಟ್ 2026**

**ಸಿ.ಸಿ ನಂಬರ್ 709/2014**

ಪಿರ್ಯಾದುದಾರರು :- ಸರ್ಕಾರದ ಪರವಾಗಿ
ಚೇಳೂರು ಪೊಲೀಸರು

*(ಪ್ರತಿನಿಧಿಸುವವರು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)*

**- ವಿರುದ್ಧ -**

ಆರೋಪಿತರು :- 2. ಸಿ.ಜೆ. ಹರೀಶ್ ಬಾಬು
ಬಿನ್ ಲೇಟ್ ಜಗದೀಶ್ವರ ಗುಪ್ತ ,
ವಯಸ್ಸು 29 ವರ್ಷ,
ವಾಸಃ ಬ್ಯಾಟರಾಯನಪುರ ಯಲಹಂಕ,
ಬೆಂಗಳೂರು.
ಸ್ವಂತ ಊರುಃ ನೆಹರು ನಗರ,
ಚಿತ್ರದುರ್ಗ ಟೌನ್.

*(ಪ್ರತಿನಿಧಿಸುವವರು ಶ್ರೀ ಎಂ.ಆರ್.ಪಿ., ವಕೀಲರು)*

## ತೀರ್ಪು

ಪ್ರಸ್ತುತ ತೀರ್ಪು ಚೇಳೂರು ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು, ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 394 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಎಸಗಿರುತ್ತಾರೆಂದು ಸಲ್ಲಿಸಿದ ಅಂತಿಮ ವರದಿಯ ಮೇಲೆ ಉದ್ಭವವಾಗಿರುತ್ತದೆ.

**2. ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ,**

ದಿನಾಂಕ:03.03.2026 ರಂದು ಮಧ್ಯಾಹ್ನ ಸುಮಾರು 3.00 ಗಂಟೆಯ ಸಮಯದಲ್ಲಿ ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು, ದುಮ್ಮಿ ಗ್ರಾಮದಲ್ಲಿ ಸಾಕ್ಷಿ-1 ರವರು ತಮ್ಮ ಅಂಗಡಿ ಬಳಿ ಇದ್ದಾಗ 1ನೇ ಆರೋಪಿ ರವರು ಸಾಕ್ಷಿ-1 ರವರ ಬಳಿ ಬಂದು, ಹೊಸಫೋನ್ ಕನೆಕ್ಷನ್ ಕೊಡಿಸುತ್ತೇನೆಂದು ಹೇಳಿ, ಫೋನ್ ಸಾಮುಗ್ರಿಗಳನ್ನು ಟೆಲಿಫೋನ್ ಪರ್ಮಿಟ್ ಅನ್ನು ತರಬೇಕೆಂದು ಹೇಳಿ, ಸಾಕ್ಷಿ-1 ರವರ ಬಾಬ್ತು ಟೆಂಪರ್‌ವರಿ ರಿಜಿಸ್ಟ್ರೇಷನ್ ನಂ ಕೆಎ.17.ಟಿಆರ್‌ಎಂ-2154/05-06 ನೇ ಒಮಿನಿ ಮಾರುತಿ ವ್ಯಾನ್‌ನಲ್ಲಿ ಹೋಗೋಣವೆಂದು ಹೇಳಿ, ಸಾಕ್ಷಿ-1 ರವರು ಆರೋಪಿ 3 ರವರನ್ನು ಪರಿಚಯಿಸಿ, ಇವರಿಗೆ

ಡ್ರೈವಿಂಗ್ ಬರುತ್ತೆಂದು ಹೇಳಿ, 3ನೇ ಆರೋಪಿ ರವರು, ಸಾಕ್ಷಿ-1 ಮತ್ತು 1ನೇ ಆರೋಪಿ ರವರನ್ನು ಕೂರಿಸಿಕೊಂಡು ಹೊಳಲ್ಕೆರೆ ಕಡೆಗೆ ಸದರಿ ಗ್ರಾಮವನ್ನು ಬಿಟ್ಟು ಸ್ವಲ್ಪ ದೂರದಲ್ಲಿದ್ದ, 2ನೇ ಆರೋಪಿ ರವರನ್ನು ಕೂರಿಸಿಕೊಂಡು, ಹೊಳಲ್ಕೆರೆಗೆ ಬಂದು ಸಾಕ್ಷಿ-2 ರವರ ಪೆಟ್ರೋಲ್ ಬಂಕಿನಲ್ಲಿ 20 ಲೀಟರ್ ಪೆಟ್ರೋಲ್ ಅನ್ನು ಹಾಕಿಸಿಕೊಂಡು, ಹಿರಿಯೂರು ಶಿರಾ ಮಾರ್ಗವಾಗಿ ಸದರಿ ಮಾರುತಿ ವ್ಯಾನ್‌ನ್ನು, 3ನೇ ಆರೋಪಿ ರವರು ಶಿರಾ-ನೆಲ್ಲಿಗೆರೆ ರಸ್ತೆಯಲ್ಲಿ ಓಡಿಸಿಕೊಂಡು ಬರುತ್ತಿರುವಾಗ್ಗೆ, ಸಾಕ್ಷಿ-1 ರವರು ಕೇಳಿದಾಗ 2ನೇ ಆರೋಪಿ ರವರು ಸಾಕ್ಷಿ-1 ರವರನ್ನು ಸುಮ್ಮನೆ ಕುಳಿತುಕೊಂಡರೆ ಸರಿ ಇಲ್ಲವಾದರೆ ಚಾಕುವಿನಿಂದ ತಿವಿಯುವುದಾಗಿ ಹೇಳಿ ಚಾಕುವನ್ನು ತೋರಿಸಿ, ಬೆದರಿಕೆ ಹಾಕಿ, ಠಾಣಾ ಸರಹದ್ದು ಅಂಕಸಂದ್ರ ಪಾರೆಸ್ಟ್ ಬಳಿ ಸಾಕ್ಷಿ-1 ರವರಿಗೆ ಕೈಗಳಿಂದ 2ನೇ ಆರೋಪಿ ರವರು ಕಪಾಳಕ್ಕೆ ಹೊಡೆದು, ಚಾಕುವಿನಿಂದ ಹೊಟ್ಟೆಗೆ ತಿವಿದು. ಕೈಗಳಿಂದ ಮೈ ಕೈಗೆ ಗುದ್ದಿ ನೋವುಂಟುಮಾಡಿ ಸಾಕ್ಷಿ-1 ರವರ ಬಳಿ ಇದ್ದ ಒಂದು ಚಿನ್ನದ ಇನ್ನಿಯಲ್ ಇರುವ ಉಂಗುರ, ಹರಳಿನ 2 ಉಂಗುರುಗಳು, ಕೊರಳು ಚೈನ್, ರೂ.5,000/- ನಗದು ಹಣ, ಮತ್ತು ಒಂದು ಸ್ಯಾಮ್‌ಸಂಗ್ ಮೊಬೈಲ್ ಪೋನ್‌ನ್ನು ಸುಲಿಗೆ ಮಾಡಿಕೊಂಡು, ಚಾಕುವನ್ನು ಸ್ಥಳದಿಂದ ಸ್ವಲ್ಪ ದೂರದಲ್ಲಿರುವ ಮುಳ್ಳಿನ ಪೊದೆಗೆ ಎಸೆದು ಸಾಕ್ಷಿ-1 ರವರನ್ನು ವ್ಯಾನ್ ನಿಂದ ಕೆಳಕ್ಕೆ ನೂಕಿ, ಮಾರುತಿ ವ್ಯಾನ್ ಅನ್ನು ಸಹ ತೆಗೆದುಕೊಂಡು ಒಟ್ಟು 3 ಲಕ್ಷದ 5 ಸಾವಿರ ರೂ. ಬೆಲೆ ಬಾಳುವ ವಸ್ತುಗಳನ್ನು ಸುಲಿಗೆ ಮಾಡಿಕೊಂಡು ಹೋಗಿ, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 394 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಕೃತ್ಯಗಳನ್ನು ಎಸಗಿರುತ್ತಾರೆಂಬುದು ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶವಾಗಿರುತ್ತದೆ.

**3.** ಅಭಿಯೋಜನಾ ದಾಖಲಾತಿಗಳನ್ನು ಪರಿಶೀಲಿಸಿದಾಗ ಘಟನೆಗೆ ಸಂಬಂಧಿಸಿದಂತೆ ಚಾಸಾ.1 ರವರು ಚಾಸಾ.23 ರವರ ಸಮಕ್ಷಮ ನೀಡಿದ ದೂರಿನ ಆಧಾರದ ಮೇಲೆ ಪ್ರಕರಣವನ್ನು ದಾಖಲಿಸಿ ತನಿಖಾ ಪ್ರಕ್ರಿಯೆಗಳನ್ನು ಕೈಗೊಂಡು ಅಂತಿಮವಾಗಿ ಚಾಸಾ.28 ರವರು ಆರೋಪಿತರ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುವುದು ಗೋಚರವಾಗಿರುತ್ತದೆ.

**4.** ಅಭಿಯೋಜನಾ ದಾಖಲಾತಿಗಳನ್ನು ಸ್ವೀಕರಿಸಿದ ನಂತರ ಯಥಾಪ್ರಕಾರ ಅವುಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿರುತ್ತದೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 190(1)(ಬಿ) ರಡಿಯಲ್ಲಿ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 394 ಸಹವಾಚಕ ಕಲಂ 34 ರ ಅಪರಾಧಗಳಿಗೆ ಸಂಜ್ಞೇಯತೆಯನ್ನು ತೆಗೆದುಕೊಳ್ಳಲಾಗಿರುತ್ತದೆ.

**5.** ಆರೋಪಿತರು ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡಿರುತ್ತಾರೆ. ನ್ಯಾಯಾಲಯದ ಸಮನ್ಸ್ ಗೆ ಪ್ರತಿಯಾಗಿ ಹಾಜರಾದ ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಲ್ಲಿ ಪ್ರತ್ಯಾಯೋಜಿಸಲಾಗಿರುವಂತೆ ಅಭಿಯೋಜನಾ ದಾಖಲಾತಿಗಳ ನಕಲನ್ನು ನೀಡಲಾಗಿರುತ್ತದೆ. ನಂತರ

ಆರೋಪಿತರ ವಿರುದ್ಧ ಆರೋಪಣೆ ರಚಿಸಿ ಅವರಿಗೆ ತಿಳಿದ ಭಾಷೆಯಲ್ಲಿ ಓದಿ ವಿವರಿಸಲಾಗಿರುತ್ತದೆ. ಅರ್ಥೈಸಿಕೊಂಡ ಆರೋಪಿತರು ತಾವು ತಪ್ಪನ್ನು ಎಸಗಿರುವುದಿಲ್ಲ, ಅಧಿವಿಚಾರಣೆಯಾಗಲಿ ಎಂದು ಉತ್ತರಿಸಿದ ಪರಿಣಾಮವಾಗಿ ಪ್ರಕರಣವನ್ನು ಅಧಿವಿಚಾರಣೆಗೆ ಕಾಯ್ದಿರಿಸಲಾಗಿರುತ್ತದೆ.

**6.** ಅಭಿಯೋಜನಾ ಪಕ್ಷವು ಆರೋಪಿತರ ಮೇಲೆ ಹೊರಿಸಿರುವ ಆರೋಪಗಳನ್ನು ರುಜುವಾತು ಪಡಿಸುವ ನಿಟ್ಟಿನಲ್ಲಿ ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನಾ ಪಕ್ಷವು ತನ್ನ ಮೇಲಿರುವ ಪ್ರಮುಖ ಹೊಣೆಯನ್ನು ರುಜುವಾತು ಪಡಿಸುವ ನಿಟ್ಟಿನಲ್ಲಿ ಚಾಸಾ.2 ರವರನ್ನು ಪ್ರಾಸಾ.1 ಎಂದು, ಚಾಸಾ.13 ರವರನ್ನು ಪ್ರಾಸಾ.2 ಎಂದು, ಚಾಸಾ.7 ರವರನ್ನು ಪ್ರಾಸಾ.3 ಎಂದು ಮತ್ತು ಚಾಸಾ.6 ರವರನ್ನು ಪ್ರಾಸಾ.4 ಎಂದು ವಿಚಾರಣೆ ಮಾಡಿರುತ್ತಾರೆ ಮತ್ತು ಎರಡು ದಸ್ತಾವೇಜಗಳನ್ನು ನಿಪಿ.1 ಮತ್ತು ನಿಪಿ.2 ಎಂದು ನಿಶಾನೀಕರಿಸಲಾಗಿರುತ್ತೆದೆ. ಈ ಮೇಲ್ಕಂಡ ಪ್ರಕರಣವು ಮೂಲ ಸಿ.ಸಿ. ಸಂಖ್ಯೆ:257/2007 ರಲ್ಲಿ ಆದ ಆದೇಶದ ಪ್ರಕಾರ ಆ ಪ್ರಕರಣದ 2ನೇ ಆರೋಪಿಯಾದ ಹರೀಶ್ ಬಾಬು ರವರ ವಿರುದ್ಧ ವಿಭಜಿತಗೊಂಡ ಪ್ರಕರಣವಾಗಿರುತ್ತದೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮೂಲ ಸಿ.ಸಿ. ಸಂಖ್ಯೆ 257/2007 ರಲ್ಲಿನ ಸಾಕ್ಷಿ ವಿಚಾರಣೆಯನ್ನೇ ಈ ಪ್ರಕರಣದಲ್ಲಿ ಅಳವಡಿಕೊಳ್ಳುವಂತೆ ಕೋರಿಕೊಂಡಿರುತ್ತಾರೆ. ಮೂಲ ಸಿ.ಸಿ. ಸಂಖ್ಯೆ 257/2007 ರ ಪ್ರಕರಣದರಲ್ಲಿ ಪ್ರಾ.ಸಾ.1 ರಿಂದ ಪ್ರಾ.ಸಾ.13 ರವರ ಮೌಖಿಕ ಸಾಕ್ಷ್ಯ ಹಾಗೂ ಹತ್ತೊಂಬತ್ತು ದಸ್ತಾವೇಜಗಳನ್ನು ನಿಪಿ.1 ರಿಂದ ನಿಪಿ.19 ಎಂದು, 4 ಮುದ್ದೆ ಮಾಲುಗಳನ್ನು ಮು.ಮಾ-1 ರಿಂದ 4 ಎಂದು ನಿಶಾನೀಕರಿಸಲಾಗಿರುತ್ತೆದೆ.

**7.** ಅಭಿಯೋಜನೆಯ ಪ್ರಕರಣದ ಸಾಕ್ಷ್ಯವಿಚಾರಣೆ ಮುಗಿದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತರನ್ನು ಪ್ರಶ್ನಿಸಿ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು.

**8.** ಉಭಯ ಪಕ್ಷಕಾರರ ವಾದ ವಿವಾದಗಳನ್ನು ಆಲಿಸಲಾಯಿತು ಹಾಗೂ ಕಡತದ ಮೇಲಿರುವ ಎಲ್ಲಾ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಪರಿಣಾಮವಾಗಿ ಪ್ರಸ್ತುತ ಪ್ರಕರಣದ ಇತ್ಯರ್ಥಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತದೆ.

> **1.** ದಿನಾಂಕ:03-03-2006 ರಂದು ಮಧ್ಯಾಹ್ನ 3-00 ಗಂಟೆ ಸಮಯದಲ್ಲಿ ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು ದುಮ್ಮಿ ಗ್ರಾಮದಲ್ಲಿ ಸಾಕ್ಷಿ-1 ಜೆ.ಸಿ. ಬಸವಲಿಂಗಪ್ಪ ರವರು ತಮ್ಮ ಅಂಗಡಿ ಬಳಿ ಇದ್ದಾಗ 1ನೇ ಆರೋಪಿಯು ಸಾಕ್ಷಿ-1 ರವರ ಬಳಿ ಬಂದು ಹೊಸ ಫೋನ್ ಕನೆಕ್ಷನ್ ಕೊಡಿಸುತ್ತೇನೆಂದು ಹೇಳಿ ಫೋನ್ ಸಾಮಾಗ್ರಿಗಳನ್ನು ಮತ್ತು ಟೆಲಿಫೋನ್ ಪರಿಟನ್ನು ತರಬೇಕೆಂದು ಹೇಳಿ ಸಾಕ್ಷಿ 1 ರವರ ಬಾಬು ಟೆಂಪರ್‌ವರಿ ರಿಜಿಸ್ಟ್ರೇಷನ್ ನಂ ಕೆಎ-17-ಟಿಆಎಂ-2154/05-06ನೇ ಓಮಿನಿ ಮಾರುತಿ ಫ್ಯಾನ್‌ನಲ್ಲಿ ಹೋಗೋಣವೆಂದು ಹೇಳಿ ಸಾಕ್ಷಿ

1 ರವರಿಗೆ 3ನೇ ಆರೋಪಿಯನ್ನು ಪರಿಚಯಿಸಿ ಇವರಿಗೆ ಡ್ರೈವಿಂಗ್ ಬರುತ್ತದೆಂದು ಹೇಳಿ, 3ನೇ ಆರೋಪಿಯವರು 1ನೇ ಸಾಕ್ಷಿ ಮತ್ತು 1ನೇ ಆರೋಪಿರವರನ್ನು ಸದರಿ ವಾಹನದಲ್ಲಿ ಕೂರಿಸಿಕೊಂಡು ಹೊಳಲ್ಕೆರೆ ಕಡೆಗೆ ಸದರಿ ಗ್ರಾಮವನ್ನು ಬಿಟ್ಟು ಸ್ವಲ್ಪ ದೂರದಲ್ಲಿದ್ದ 2ನೇ ಆರೋಪಿ ರವರನ್ನು ಕೂರಿಸಿಕೊಂಡು ಹೊಳಲ್ಕೆರೆಗೆ ಬಂದು ಸಾಕ್ಷಿ-2 ರವರ ಪೆಟ್ರೋಲ್ ಬಂಕಿನಲ್ಲಿ 20 ಲೀಟರ್ ಪೆಟ್ರೋಲನ್ನು ಹಾಕಿಸಿಕೊಂಡು ಹಿರಿಯೂರು-ಶಿರಾ ಮಾರ್ಗವಾಗಿ ಸದರಿ ಮಾರುತಿ ವ್ಯಾನನ್ನು 3ನೇ ಆರೋಪಿಯು ಶಿರಾ-ನೆಲ್ಲಿಗೆರೆ ರಸ್ತೆಯಲ್ಲಿ ಓಡಿಸಿಕೊಂಡು ಬರುತ್ತಿರುವಾಗ ಸಾಕ್ಷಿ-1 ರವರು ಕೇಳಿದಾಗ 2ನೇ ಆರೋಪಿಯು ಸಾಕ್ಷಿ ರವರಿಗೆ ಸುಮ್ಮನೆ ಕುಳಿತುಕೊಂಡರೆ ಸರಿ ಇಲ್ಲವಾದರೆ ಚಾಕುವಿನಿಂದ ತಿವಿಯುವುದಾಗಿ ಹೇಳಿ, ಚಾಕುವನ್ನು ತೋರಿಸಿ ಬೆದರಿಕೆ ಹಾಕಿ, ಚೇಳೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಅಂಕಸಂದ್ರ ಫಾರೆಸ್ಟ್ ಬಳಿ 2ನೇ ಆರೋಪಿಯು ಸಾಕ್ಷಿ-1 ರವರಿಗೆ ಕೈಗಳಿಂದ ಕಪಾಳಕ್ಕೆ ಹೊಡೆದು, ಚಾಕುವಿನಿಂದ ಹೊಟ್ಟೆಗೆ ತಿವಿದು, ಕೈಗಳಿಂದ ಮೈಕೈಗೆ ಗುದ್ದಿ ನೋವುಂಟು ಮಾಡಿ ಸಾಕ್ಷಿ 1 ರವರ ಬಳಿ ಇದ್ದ ಒಂದು ಚಿನ್ನದ ಇನ್ಸಿಯಲ್ ಇರುವ ಉಂಗುರ, ಹರಳಿನ 2 ಉಂಗುರಗಳು, ಕೊರಳಚೈನ್, 5,000/- ರೂ ನಗದು ಹಣ ಮತ್ತು ಒಂದು ಸ್ಯಾಮ್‌ಸಂಗ್ ಮೊಬೈಲ್‌ನ್ನು ಸುಲಿಗೆ ಮಾಡಿಕೊಂಡು ಚಾಕುವನ್ನು ಸ್ಥಳದಿಂದ ಸ್ವಲ್ಪ ದೂರದಲ್ಲಿರುವ ಮುಳ್ಳಿನ ಪೊದೆಗೆ ಎಸೆದು, ಸಾಕ್ಷಿ-1 ರವರನ್ನು ಕೆಳಕ್ಕೆ ನೂಕಿ, ಮಾರುತಿ ವ್ಯಾನನ್ನು ಸಹ ತೆಗೆದುಕೊಂಡು ಒಟ್ಟು ಮೂರು ಲಕ್ಷದ ಐದು ಸಾವಿರ ರೂ ಬೆಲೆ ಬಾಳುವ ವಸ್ತುಗಳನ್ನು ಸುಲಿಗೆ ಮಾಡಿಕೊಂಡು ಹೋಗಿರುತ್ತೀರಿ, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 394 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನಾ ಪಕ್ಷವು ನಿಸ್ಸಂಶಯವಾಗಿ ರುಜುವಾತು ಪಡಿಸಿರುತ್ತಾರೆಯೇ?

**2.** ಏನು ಆದೇಶ?

**9.** ಮೇಲ್ಕಂಡ ಅಂಶಗಳಿಗೆ ಸಂಬಂಧಿಸಿದಂತೆ ಅಭಿಯೋಜನಾ ಪಕ್ಷವು ಕಡತದ ಮೇಲೆ ಹಾಜರು ಪಡಿಸಿರುವ ಸಾಕ್ಷಿದಾರರ ಮೌಖಿಕ ಸಾಕ್ಷ್ಯ ಹಾಗೂ ದಸ್ತಾವೇಜು ಸಾಕ್ಷ್ಯಗಳನ್ನು ಪರಾಮರ್ಶೆ ಮಾಡಿದೆ. ಆ ಪರಿಣಾಮವಾಗಿ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿರುತ್ತದೆ.

**ಅಂಶ 1 :- ನಕಾರಾತ್ಮಕವಾಗಿ,**
**ಅಂಶ 2 :- ಅಂತಿಮ ಆದೇಶದಂತೆ,**
**ಈ ಕೆಳಕಂಡ :**

**<u>ಕಾರಣಗಳು</u>**

**10.** **<u>ಅಂಶ 1</u> :-** ಆರೋಪಿಯು ಘಟನಾ ದಿವಸ, ಘಟನಾ ಸ್ಥಳದಲ್ಲಿ, ಘಟನಾ ಸಮಯದಲ್ಲಿ ಆಪಾಧಿತ ಕೃತ್ಯಗಳನ್ನು ಎಸಗುವುದರ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 394 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಎಸಗಿರುತ್ತಾರೆಂಬುದು ಅಭಿಯೋಜನೆಯ ಸ್ಪಷ್ಟ

ನಿಲುವಾಗಿರುತ್ತದೆ.

**11.** ಕ್ರಿಮಿನಲ್ ಪ್ರಕ್ರಿಯಾ ತತ್ವದ ಅಡಿಯಲ್ಲಿ ಆರೋಪಿತರ ಮೇಲೆ ಹೊರಿಸಿರುವ ಆಪಾದನೆಗಳ ಎಲ್ಲಾ ಘಟಕಾಂಶಗಳನ್ನು ನಿಸ್ಸಂಶಯವಾಗಿ ರುಜುವಾತು ಪಡಿಸುವ ಹೊಣೆ ಅಭಿಯೋಜನೆಯದ್ದಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನಾ ಪಕ್ಷವು ತನ್ನ ಮೇಲಿರುವ ಪ್ರಮುಖ ಹೊಣೆಯನ್ನು ರುಜುವಾತು ಪಡಿಸುವ ನಿಟ್ಟಿನಲ್ಲಿ ಚಾಸಾ.2 ರವರನ್ನು ಪ್ರಾಸಾ.1 ಎಂದು, ಚಾಸಾ.13 ರವರನ್ನು ಪ್ರಾಸಾ.2 ಎಂದು, ಚಾಸಾ.7 ರವರನ್ನು ಪ್ರಾಸಾ.3 ಎಂದು ಮತ್ತು ಚಾಸಾ.6 ರವರನ್ನು ಪ್ರಾಸಾ.4 ಎಂದು ವಿಚಾರಣೆ ಮಾಡಿರುತ್ತಾರೆ ಮತ್ತು ಎರಡು ದಸ್ತಾವೇಜಗಳನ್ನು ನಿಪಿ.1 ಮತ್ತು ನಿಪಿ.2 ಎಂದು ನಿಶಾನೀಕರಿಸಲಾಗಿರುತ್ತೆದೆ. ಈ ಮೇಲ್ಕಂಡ ಪ್ರಕರಣವು ಮೂಲ ಸಿ.ಸಿ. ಸಂಖ್ಯೆ:257/2007 ರಲ್ಲಿ ಆದ ಆದೇಶದ ಪ್ರಕಾರ ಆ ಪ್ರಕರಣದ 2ನೇ ಆರೋಪಿಯಾದ ಹರೀಶ್ ಬಾಬು ರವರ ವಿರುದ್ಧ ವಿಭಜಿತಗೊಂಡ ಪ್ರಕರಣವಾಗಿರುತ್ತದೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮೂಲ ಸಿ.ಸಿ. ಸಂಖ್ಯೆ 257/2007 ರಲ್ಲಿನ ಸಾಕ್ಷಿ ವಿಚಾರಣೆಯನ್ನೇ ಈ ಪ್ರಕರಣದಲ್ಲಿ ಅಳವಡಿಕೊಳ್ಳುವಂತೆ ಕೋರಿಕೊಂಡಿರುತ್ತಾರೆ. ಮೂಲ ಸಿ.ಸಿ. ಸಂಖ್ಯೆ 257/2007 ರ ಪ್ರಕರಣದರಲ್ಲಿ ಪ್ರಾ.ಸಾ.1 ರಿಂದ ಪ್ರಾ.ಸಾ.13 ರವರ ಮೌಖಿಕ ಸಾಕ್ಷ್ಯಹಾಗೂ ಹತ್ತೊಂಬತ್ತು ದಸ್ತಾವೇಜಗಳನ್ನು ನಿಪಿ.1 ರಿಂದ ನಿಪಿ.19 ಎಂದು, 4 ಮುದ್ದೆ ಮಾಲುಗಳನ್ನು ಮು.ಮಾ-1 ರಿಂದ 4 ಎಂದು ನಿಶಾನೀಕರಿಸಲಾಗಿರುತ್ತೆದೆ.

**12.** ಪ್ರಸ್ತುತ ಪ್ರಕರಣದಲ್ಲಿ ಚರ್ಚಿಸಬೇಕಾದ ಪ್ರಮುಖ ಅಂಶವೇನೆಂದರೆ ಈ ಪ್ರಕರಣವನ್ನು ಚಾ.ಸಾ-1 ಜೆ.ಸಿ. ಬಸವಲಿಂಗಪ್ಪ ರವರು ನೀಡಿದ ಪ್ರಥಮ ವರ್ತಮಾನ ವರದಿಯ ಆಧಾರದ ಮೇಲೆ ದಾಖಲು ಮಾಡಲಾಗಿರುತ್ತದೆ. ಈ ಪ್ರಕರಣದಲ್ಲಿ ಅಭಿಯೋಜನೆಯವರು ಹಾಜರು ಪಡಿಸಿರುವ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯಗಳನ್ನು ಸಂಕ್ಷೀಪ್ತವಾಗಿ ಪರಿಶೀಲಿಸಿದಾಗ ಚಾಸಾ.1 ರವರನ್ನು ಪ್ರಾ.ಸಾ-1 ಎಂದು ವಿಚಾರಣೆ ಮಾಡಿದ್ದು, ಸದರಿಯವರು ಪಿರ್ಯಾದಿದಾರರಾಗಿದ್ದು, ಪ್ರಾ.ಸಾ-1 ರವರು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣೆಯಲ್ಲಿ, ತಾನು ಕಿರಾಣಿ ಅಂಗಡಿಯನ್ನು ನಡೆಸುತ್ತೇನೆ. ತನ್ನದು ಮಾರುತಿ ಓಮಿನಿ ವಾಹನ ಇರುತ್ತದೆ. 5 ವರ್ಷದ ಹಿಂದೆ 3 ಗಂಟೆಯ ಸಮಯದಲ್ಲಿ 1 ನೇ ಅಪಾದಿತನು ತನ್ನೊಂದಿಗೆ 2 ಮತ್ತು 3ನೇ ಅಪರಾಧಿಗಳನ್ನು ಕರೆದುಕೊಂಡು ಬಂದನು. ನಮ್ಮ ವಾಹನದಲ್ಲಿ ತನ್ನನು ಹೊಳಲ್ಕೆರೆ ಗ್ರಾಮಕ್ಕೆ ಕರೆದುಕೊಂಡು ಬಂದರು. ನಮ್ಮ ವಾಹನವನ್ನು 3ನೇ ಆಪಾದಿತ ನವೀನ್ ಇವರು ಚಲಾವಣೆ ಮಾಡಿರುತ್ತಾನೆ. ಹೊಳಲ್ಕೆರೆಗೆ ಬಂದೆವು ಅಲ್ಲಿ ಪೆಟ್ರೋಲ್ ಬಂಕ್ ನಲ್ಲಿ ಆಪಾದಿತರು ತನ್ನ ಕಡೆ ದುಡ್ಡನ್ನು ತೆಗೆದುಕೊಂಡು 20 ಲೀಟರ್ ಪೆಟ್ರೋಲ್ ಹಾಕಿಸಿಕೊಂಡರು. 1ನೇ ಅಪಾದಿತನು ಯಾರಿಗೋ ಫೋನ್ ಮಾಡಿದನು. ನಂತರ ತನಗೆ ಸದರಿ ಎಕ್ಸ್‌ಚೆಂಜ್ ಆಫೀಸಿನವರು ಚಿಕ್ಕ ಜಾಜಾರಿಗೆ ಹೋಗಿರುತ್ತಾರೆ ಎಂದು ಸುಳ್ಳು ಹೇಳಿ ಚಿತ್ರದುರ್ಗಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಚಿತ್ರದುರ್ಗದ ಬೈಪಾಸ್ ನಿಂದ ಹಿರಿಯೂರು

ಬೈಪಾಸಿಗೆ ಬಂದಿರುತ್ತಾರೆ. ಸಂತರ ಆಲ್ಲಿಂದ ಶಿರಾ ಕಡೆಯಿಂದ ಚೇಳೂರಿನ ಅಡ್ಡ ರಸ್ತೆಗೆ ಬಂದಿರುತ್ತಾರೆ. ಶಿರಾ ಮತ್ತು ಹಿರಿಯೂರು ಮಧ್ಯ ಆಪಾದಿತರು ತನ್ನ ಕಡೆಯಿಂದ ಮೂರು ಬಂಗಾರದ ಉಂಗುರಗಳನ್ನು, ಒಂದು ಮೊಬೈಲ್, ಒಂದು ಬಂಗಾರದ ಕತ್ತು ಚೈನ್ ರೂ.6,000/- ಹಣವನ್ನು ಬಲವಂತವಾಗಿ ಕಿತ್ತುಕೊಂಡು ತಾನು ಕೂಗಾಡುತ್ತಿದ್ದರಿಂದ ಆಪಾದಿತರು ತನಗೆ ಜೋರು ಮಾಡಿ ಹಲ್ಲಿಗೆ, ಕಪಾಳಕ್ಕೆ ಮತ್ತು ಹೊಟ್ಟೆಗೆ ಕೈಯಿಂದ ತಿವಿದಿರುತ್ತಾರೆ. ಗಲಾಟೆ ಮಾಡಿದರೆ, ಕೂಗಿಕೊಂಡರೆ ನಿನ್ನನ್ನು ಇಲ್ಲಿಯೇ ತೆಗದು ಬಿಡುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ತಮ್ಮ ಮನೆಯ 3.30 ಕ್ಕೆ ಬಿಟ್ಟವು. ಕಾಡಿಗೆ ಬಂದಾಗ ಸಮಯ 7 ರಿಂದ 7.30 ಗಂಟೆಯಾಗಿತ್ತು. ಕಾಡಿನಲ್ಲಿ ತನಗೆ ಇಳಿ ಎಂದು ಹೇಳುತ್ತಾ ಆಪಾದಿತರಿಗೆ ತಾನು ಯಾವುದಾದರೂ ಊರಿನಲ್ಲಿ ಇಳಿಸಿ ಎಂದು ಕೇಳಿಕೊಂಡಾಗ ಆಪಾದಿತರು ವಾಹವನ್ನು ನಿಧಾನವಾಗಿ ಜಲಾಯಿಸುತ್ತಾ ವಾಹನದ ಡೊರನ್ನು ತೆಗೆದು ತನ್ನನ್ನು ಕಾಸರಿನಲ್ಲಿ ಕೆಳಗೆ ದಬ್ಬಿದರು ಆ ಸಮಯದಲ್ಲಿ ಆಪಾದಿತರಿಗೆ ತಾನು ತನ್ನ ಕಡೆಯಿಂದ ಎಲ್ಲಾ ಹಣವನ್ನು ಒಡವೆಗಳನ್ನು ದೋಚಿಕೊಂಡಿರುತ್ತೀರಿ, ತನಗೆ ಹಸ್ವಾಗಿದೆ ಎಂದು ಹೇಳಿದಾಗ ಆಪಾದಿತರು ರೂ.100 ಹಣವನ್ನು ಮತ್ತೊಮ್ಮೆ ಹಣವನ್ನು ಪೀಡಿಸಿದಾಗ ಮತ್ತ ರೂ.100 ಹಣವನ್ನು ನೀಡಿ ದಬ್ಬಿ ತನ್ನ ವಾಹನಮ್ನ ತೆಗೆದುಕೊಂಡು ಹೋಗಿರುತ್ತಾರೆ. ಆ ಸಮಯದಲ್ಲಿ ಒಬ್ಬ ದ್ವಿಚಕ್ರ ವಾಹನದವನು ಬಂದನು ಅವನುನ್ನು ನಿಲ್ಲಿಸಿ ತನ್ನ ವಿಚಾರ ತಿಳಿಸಿದಾಗ ಸದರಿಯವರು ತನಗೆ ಚೇಳೂರು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಬಿಡುತ್ತೇನೆ ಎಂದು ಹೇಳಿ ತನ್ನನ್ನು ಚೇಳೂರು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದಿರುತ್ತಾರೆ. ಪೊಲೀಸರಿಗೆ ಸದರಿ ವಿಚಾರವನ್ನು ತಿಳಿಸಿದೆನು. ಪೊಲೀಸರಿಗೆ ತಿಳಿಸಿ ಚೇಳೂರು ಪೊಲಿಲಸರಿಗೆ ದೂರನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಗಿರುತ್ತದೆ. ನಂತರ ಘಟನಾ ಸ್ಥಳಕ್ಕೆ ಪೊಲೀಸರು ತನ್ನನ್ನು ಕರೆದುಕೊಂಡು ಹೋಗಿ ಘಟನಾ ಸ್ಥಳದಲ್ಲಿ ಮಹಜರ್ ಮಾಡಿರುತ್ತಾರೆ. ಸದರಿ ಮಹಜರ್ ಅನ್ನು ನಿಪಿ-2 ಎಂದು ಹಾಗೂ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಗಿರುತ್ತದೆ. ತಾನು ದೂರನ್ನು ನೀಡಿದ ನಂತರ ಪೊಲೀಸರಿಗೆ ಪುನಃ ಹೇಳಿಕೆಯನ್ನು ನೀಡಿರುತ್ತೇನೆ. ತನ್ನಿಂದ ಆಪಾದಿತರು ದೋಚಿಕೊಂಡ ಒಡವೆಗಳನ್ನು ಯಶವಂತಪುರ ಪೊಲೀಸರು ತನಗೆ ಕೊಡಿಸಿರುತ್ತಾರೆ. ತಾನು ದೂರು ಸಲ್ಲಿಸಿದ ಎಂಟು ತಿಂಗಳ ನಂತರ ಒಡವೆಗಳು ತನಗೆ ಸಿಕ್ಕಿರುತ್ತವೆ. ಆಪಾದಿತರು ತನ್ನಿಂದ ದೋಚಿಕೊಂಡು ಮೂರು ಉಂಗುರಗಳು ಹಾಗೂ ಒಂದು ಕತ್ತು ಚೈನ್ ಅನ್ನು ಸಾಕ್ಷಿ ನೋಡಿ ಗುರುತಿಸಿದು, ಮೂರು ಉಂಗುರಗಳನ್ನು ಮು. ಮಾ-1 ಎಂದು, 1 ಚೈನ್ ಅನ್ನು ಮು.ಮಾ-2 ಎಂದು ಮತ್ತು ವಾಹವನ್ನು ಮು.ಮಾ-3 ಎಂದು ಗುರುತಿಸಲಾಗಿರುತ್ತದೆ ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ.

**13.** ಚಾಸಾ.2 ಪ್ರದೀಪ್ ರವರನ್ನು ಪ್ರಾಸಾ.2 ಎಂದು ವಿಚಾರಣೆ ಮಾಡಿದ್ದು, ಅವರು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣೆಯಲ್ಲಿ, ತಾನು ಹೊಳಲಕೆರೆಯಲ್ಲಿ ಭಾರತ್ ಪೆಟ್ರೋಲ್ ಬಂಕಿನಲ್ಲಿ ಸೇಲ್‌ಮೆನ್

ಎಂದು ಸನ್ 2006ರಲ್ಲಿ ಕೆಲಸ ಮಾಡಿರುತ್ತೇನೆ. ತನಗೆ ಆಪಾದಿತರ ಪರಿಚಯ ಇರುವುದಿಲ್ಲ. ಆಪಾದಿತರನ್ನು ಈ ಹಿಂದೆ ತಾನು ಎಲ್ಲಿಯೂ ನೋಡಿರುವುದಿಲ್ಲ. ತಾನು ಪೋಲೀಸರ ಎದುರಿಗೆ ತಾನು ಹೇಳಿಕೆ ನೀಡಿರುವುದಿಲ್ಲ ಎಂದು ಅಭಿಯೋಜನಾ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುತ್ತಾರೆ.

**14.** ಚಾಸಾ.5 ಅರ್ಜುನ್ ಸಿಂಗ್ ರವರನ್ನು ಪ್ರಾಸಾ.3 ಎಂದು ವಿಚಾರಣೆ ಮಾಡಿದ್ದು, ಅವರು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣೆಯಲ್ಲಿ, ತನಗೆ ಸೇರಿದ ಅಂಬಿಕ ಜ್ಯುಯಲರ್ಸ್ ಎಂಬ ಒಡವೆ ಅಂಗಡಿಯು ಸುಮಾರು 8 ವರ್ಷಗಳಿಂದ ಹೆಬ್ಬಾಳದ ದಾಸರಹಳ್ಳಿಯಲ್ಲಿ ಇರುತ್ತದೆ. ಅದರ ಮಾಲೀಕ ತಾನೇ ಇರುತ್ತೇನೆ. ತಾನು ಅಂಗಡಿಯಲ್ಲಿ ಒಡವೆಗಳನ್ನು ಗಿರವಿ ಇಟ್ಟುಕೊಳ್ಳುತ್ತೇನೆ ಹಾಗೂ ಮಾರಾಟ ಮಾಡುತ್ತೇನೆ. ಇಂದು ನ್ಯಾಯಾಲಯದ ಮುಂದಿರುವ ಹರೀಶ್ ಬಾಬು 2ನೇ ಆಪಾದಿತ ತನಗೆ ಗೊತ್ತು. 2006ರಲ್ಲಿ ಆಪಾದಿತನಿಂದ 3 ಉಂಗುರಗಳು ಮತ್ತು ಒಂದು ಚೈನ್ ಅನ್ನು ಹಣ ಬೇಕು ಎಂದು ಹೇಳಿ ತನಗೆ ಮಾರಾಟ ಮಾಡಿದ್ದರು. ಎಷ್ಟು ಹಣಕ್ಕೆ ಮಾರಾಟ ಮಾಡಿದ್ದರೆಂದು ತನಗೀಗ ನೆನಪಿಲ್ಲ, ತಾನು ಒಡವೆಯನ್ನು ಕೊಂಡುಕೊಂಡ 5-6 ತಿಂಗಳ ನಂತರ ಯಶವಂತಪುರ ಆರಕ್ಷಕರು 2ನೇ ಆಪಾದಿತನನ್ನು ತನ್ನ ಅಂಗಡಿಗೆ ಕರೆದುಕೊಂಡು ಬಂದರು. ತನ್ನ ಬಳಿ 2ನೇ ಆಪಾದಿತನು ಇಟ್ಟಿದ್ದ ಚಿನ್ನವನ್ನು ಅವರಿಗೆ ಕೊಟ್ಟಿರುತ್ತೇನೆ. ಅವುಗಳನ್ನು ಎಲ್ಲಿಂದ ತಂದಿದ್ದರೆಂದು ಗೊತ್ತಿಲ್ಲ. ಪೋಲೀಸರು ವಾಪಸ್ ಕೊಡಿ ಎಂದು ಕೇಳಿದರು, ಕೊಟ್ಟಿರುತ್ತೇನೆ. ನ್ಯಾಯಾಲಯದ ಮುಂದಿರುವ ಮುಮಾ-1 ಮತ್ತು 2ನ್ನು ನೋಡಿ ತನಗೀಗ ಜ್ಞಾಪಕ ಇಲ್ಲ ಎಂದು ನುಡಿದಿರುತ್ತಾರೆ. ಪೋಲೀಸರು ತಮ್ಮ ಅಂಗಡಿಯ ಬಳಿ ಸುಮಾರು 5 ಗಂಟೆಗೆ ಬಂದಿದ್ದರು. ಎಷ್ಟು ಸಮಯ ತಮ್ಮ ಅಂಗಡಿಯ ಬಳಿ ಇದ್ದರೆಂದು ಗೊತ್ತಿಲ್ಲ. ಸಾಕ್ಷಿಗೆ ಅಮಾನತ್ತು ಮಹಜರ್ ಅನ್ನು ತೋರಿಸಲಾಗಿ, ಅದರಲ್ಲಿರುವ ರುಜುವನ್ನು ತನ್ನದೆಂದು ಒಪ್ಪಿಕೊಂಡಿರುತ್ತಾರೆ. ಅಮಾನತ್ತು ಮಹಜರ್ ಅನ್ನು ನಿ.ಪಿ.4 ಎಂದು, ರುಜುವನ್ನು ನಿಪಿ-4(ಎ) ಎಂದು ಗುರುತಿಸಲಾಗಿರುತ್ತದೆ. ನಿ.ಪಿ.4(ಎ)ನ್ನು ಠಾಣೆಯಲ್ಲಿ ಮಾಡಿರುತ್ತೇನೆ. ಯಾವ ದಿನಾಂಕ ಮಾಡಿದೆ ಎಂದು ನೆನಪಿಲ್ಲ. ಪೋಲೀಸರಿಗೆ ತಾನು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದು ನುಡಿದಿರುತ್ತಾರೆ. ದಿನಾಂಕ:23.07.2006ರಂದು ಯಶವಂತಪುರ ಪೋಲೀಸರು ತನ್ನ ಅಂಗಡಿಯ ಬಳಿ ಕರೆದು ಬಂದಿದ್ದರು. 2ನೇ ಆಪಾದಿತನು ತನ್ನ ಅಂಗಡಿಯನ್ನು ತೋರಿಸಿ, ಅವನು ಸುಲಿಗೆ ಆಭರಣಗಳನ್ನು ಇಲ್ಲೇ ಮಾರಾಟ ಮಾಡಿರುತ್ತೇನೆಂದು ಹೇಳಿದ್ದರು. ಸದರಿ ವಸ್ತುಗಳು ವಶಪಡಿಸಿಕೊಳ್ಳಬೇಕೆಂದು ತನಗೆ ಹೇಳಿದ್ದರು. ಸದರಿ ಒಡವೆಗಳನ್ನು ರೂ.15,000/- ಗಳಿಗೆ ಕೊಂಡಿದ್ದು, ಸುಲಿಗೆ ಪ್ರಕರಣಕ್ಕೆ ಸಂಬಂಧಿಸಿದ್ದೆಂದು ತಿಳಿಯದೇ ತಾನು ಖರೀದಿಸಿದ್ದೆ ಎಂದು ಅವುಗಳನ್ನು ಪೋಲೀಸರಿಗೆ ಕೊಟ್ಟೆ. ಸ್ಥಳದಲ್ಲಿ ಈ ಬಗ್ಗೆ ಮಹಜರ್‌ನ್ನು ಬರೆದಿರುತ್ತಾರೆ. ಸ್ಥಳದಲ್ಲೇ ತಾನು ರುಜು ಮಾಡಿದೆ ಎಂದರೆ ತನಗೆ ಸರಿಯಾಗಿ ನೆನಪಿಲ್ಲ ಎಂದು ಹೇಳುತ್ತಾರೆ. ನ್ಯಾಯಾಲಯದ ಮುಂದಿರುವ ಮುಮಾ-1 ಮತ್ತು 2ನ್ನು ತಾನು ಪೋಲೀಸರಿಗೆ ಕೊಟ್ಟಿದ್ದೇನೆಂದರೆ ಸಾಕ್ಷಿಯು ತನಗೆ ಸರಿಯಾಗಿ ನೆನಪಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**15.** ಚಾಸಾ.7 ಚನ್ನಬಸವಯ್ಯ ರವರನ್ನು ಪ್ರಾಸಾ.4 ಎಂದು ವಿಚಾರಣೆ ಮಾಡಿದ್ದು, ಅವರು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣೆಯಲ್ಲಿ, ತಾನು ಮಾರುತಿ ಓಮಿನಿ ನಂ.ಕೆಎ-14-4131ನೇದ್ದನ್ನು ಸನ್ 2006ರಲ್ಲಿ ಕೊಂಡುಕೊಂಡಿರುತ್ತೇನೆ. ಬೆಂಗಳೂರಿನ ಎಂ.ಸಿದ್ದಯ್ಯ ರಸ್ತೆಯಲ್ಲಿರುವ ಎಂ.ಎಸ್.ಆಟೋ ಕಲ್ಸಲ್‌ಟೆಂಟ್ಸ್ ಕಡೆಯಿಂದ ರೂ.10,000/-ಗಳಿಗೆ ಕೊಂಡುಕೊಂಡಿರುತ್ತೇನೆ. 3 ತಿಂಗಳು ಕಳೆದು ಸದರಿ ವಾಹನವನ್ನು ತನ್ನ ಹೆಸರಿಗೆ ವರ್ಗಾವಣೆ ಮಾಡಿಸಿಕೊಳ್ಳಲು ಹೋದಾಗ, ಸದರಿ ವಾಹನದ ದಾಖಲೆಗಳು ನಕಲಿ ದಾಖಲೆಗಳೆಂದು ತಿಳಿಯಿತು. ಎಂ.ಎಸ್.ಆಟೋ ಕಲ್ಸಲ್‌ಟೆಂಟ್ಸ್ ಮಾಲೀಕರು ಸಿದ್ದೀಕ್, ವಾಪಸ್ ಅಂಗಡಿಗೆ ವಾಹನವನ್ನು ಕೊಡಲು ಹೋದಾಗ ಸದರಿ ಅಂಗಡಿಯನ್ನು ಮುಚ್ಚಿ ಅಲ್ಲಿ ಟೀ ಅಂಗಡಿಯನ್ನು ತೆರೆದಿದ್ದರು. 2007ರಲ್ಲಿ ಪೋಲೀಸರು ಮೇಲೆ ಹೇಳಿದ ವಾಹನವನ್ನು ತನ್ನಿಂದ ಚಿತ್ರದುರ್ಗದಲ್ಲಿ ವಶಪಡಿಸಿಕೊಂಡಿರುತ್ತಾರೆ. ಪೋಲೀಸರು ಅದು ಕಳ್ಳತನದ ವಾಹನ ಎಂದು ತನ್ನಿಂದ ವಶಪಡಿಸಿಕೊಂಡಿರುತ್ತಾರೆ. ಯಶವಂತಪುರ ಪೋಲೀಸ್ ಠಾಣೆಯಿಂದ ಸುಮಾರು ಜನ ಬಂದಿದ್ದರು. ಆರೋಪಿಗಳನ್ನು ತಾನು ನೋಡಿಲ್ಲ, ಸಾಕ್ಷಿಗೆ ಅಮಾನತ್ತು ಮಹಜರ್ ಅನ್ನು ತೋರಿಸಲಾಗಿ, ಅದರಲ್ಲಿರುವ ರುಜುವನ್ನು ತನ್ನದೆಂದು ಒಪ್ಪಿಕೊಂಡಿರುತ್ತಾರೆ. ಅಮಾನತ್ತು ಮಹಜರ್ ಅನ್ನು ನಿ.ಪಿ-5 ರುಜುವನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿ.ಪಿ.ಎ(ಎ)ನ್ನು ನನ್ನ ಮನೆಯಲ್ಲಿ ಮಾಡಿರುತ್ತೇನೆ. ನಿಪಿ-5ರ ವಿಚಾರ ತನಗೆ ಗೊತ್ತಿಲ್ಲ, ಖಾಲಿ ಹಾಳೆಯಲ್ಲಿ ರುಜುವನ್ನು ತೆಗೆದುಕೊಂಡಿರುತ್ತಾರೆ ಎಂದು ಅಭಿಯೋಜನಾ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷಿ ನುಡಿದಿರುತ್ತಾರೆ.

**16.** ಚಾಸಾ.13 ಡಾ. ಆರ್. ತಿಪ್ಪೇಶಿ ರವರನ್ನು ಪ್ರಾಸಾ.5 ಎಂದು ವಿಚಾರಣೆ ಮಾಡಿದ್ದು, ಅವರು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣೆಯಲ್ಲಿ, ತಾನು ಅಕ್ಟೋಬರ್-3 ರಿಂದ ಜುಲೈ-7 ರವರೆಗೆ ಹೊಳಲ್ಕೆರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ದಿನಾಂಕಃ04.03.2006 ರಂದು ಮಧ್ಯಾಹ್ನ 2.30ರಲ್ಲಿ ಅಸಾ-1 ಬಸವಲಿಂಗಪ್ಪ ಎನ್ನುವವರು ದರೋಡೆಯ ಹಿನ್ನಲೆಯಲ್ಲಿ ಗಾಯವಾಗಿದ್ದು, ತನ್ನ ಬಳಿ ಬಂದಿದ್ದು ಅವರನ್ನು ಪರೀಕ್ಷೆ ಮಾಡಲಾಗಿ ಅವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ. ಎದೆಯ ಕೆಳಭಾಗದಲ್ಲಿ ಒಂದು ತರಚಿದ ಗಾಯ ಅರ್ಧ ಇಂಟು ಅರ್ಧ ಇಂಚು ಗಾತ್ರದಿದ್ದು ಅದು ಒಣಗಿರುತ್ತದೆ. ತರಚಿದ ಗಾಯ ಅರ್ಧ ಇಂಟು ಅರ್ಧ ಇಂಚು ಗಾತ್ರವಿದ್ದು ಅದು ಒಣಗಿರುತ್ತದೆ ಹಾಗೂ 1ನೇ ಗಾಯದ ಸ್ವಲ್ಪ ಕೆಳಭಾಗದಲ್ಲಿರುತ್ತದೆ. ಎಡ ಕೆನ್ನೆಯ ಮೇಲ್ಭಾಗದಲ್ಲಿ ನೋವಿರುವುದು ಕಂಡು ಬಂತು. ಎಡಗೈನ ಹೆಬ್ಬೆಟ್ಟಿನಲ್ಲಿ ಒಂದು ತರಚಿದ ಗಾಯ ಅರ್ಧ ಇಂಟು ಅರ್ಧ ಇಂಚು ಗಾತ್ರವಿದ್ದು ಅದು ಒಣಗಿರುತ್ತದೆ. ಮೂಗಿನ ಮೇಲೆ ನೋವು ಇರುವುದು ಕಂಡು ಬಂತು. ಈ ಬಗ್ಗೆ ತಾನು ಚಿಕಿತ್ಸೆ ನೀಡಿ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಸದರಿ ರೋಗಿ ಒಳ ರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ. ಮೇಲಿನ ಎಲ್ಲಾ ಗಾಯಗಳು ಸಾಧಾರಣಾ ಸ್ವರೂಪದ ಗಾಯಗಳಾಗಿರುತ್ತವೆ. ಈ ಬಗ್ಗೆ ತಾನು ಗಾಯದ ಪ್ರಮಾಣ ಪತ್ರ

ನೀಡಿರುತ್ತೇನೆ. ಸಾಕ್ಷಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ನಿಪಿ-6, ಸಾಕ್ಷಿ ರುಜುವನ್ನು ನಿಪಿ-6(ಎ) ಎಂದು ಗುರುತಿಸಲಾಗಿರುತ್ತದೆ. 1 ಮತ್ತು 2ನೇ ಗಾಯ ನ್ಯಾಯಾಲಯದ ಮುಂದಿರುವ ಚಾಕುವಿನಿಂದ ಆಗಮ ಸಾಧ್ಯತೆ ಇರುವುದಿಲ್ಲ, ಉಳಿದ ಗಾಯಗಳು ಕೈನಿಂದ ಗುದ್ದಿದಾಗ ಆಗುವ ಸಾಧ್ಯತೆ ಇರುತ್ತದೆ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

**17.** ಚಾಸಾ.10 ವೇಣುಗೋಪಾಲ ರವರನ್ನು ಪ್ರಾಸಾ.6 ಎಂದು ವಿಚಾರಣೆ ಮಾಡಿದ್ದು, ಅವರು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣೆಯಲ್ಲಿ, ಸಾಕ್ಷಿಗೆ ದಿನಾಂಕ.30.10.2006 .10.2006 ರಲ್ಲಿರುವ ರುಜು ತೋರಿಸಲಾಗಿ ತನ್ನದೆಂದು ಒಪ್ಪಿಕೊಂಡಿದ್ದು ಮಹಜರ್ ಅನ್ನು ನಿಪಿ-7, ಸಾಕ್ಷಿ ರುಜುವನ್ನು ನಿಪಿ-7(ಎ) ಎಂದು ಗುರುತಿಸಲಾಗಿರುತ್ತದೆ. ಸದರಿ ರುಜುವನ್ನು ಯಶವಂತಪುರ ಠಾಣೆಯಲ್ಲಿ ಸಹಿ ಮಾಡು ಎಂದಿದ್ದರಿಂದ ಮಾಡಿರುತ್ತೇನೆ. ಯಶವಂತಪುರ ಠಾಣೆಯಲ್ಲಿ ತನ್ನ ಮೊಬೈಲ್ ಕಳೆದು ಹೋಗಿದೆ ಎಂದು ಠಾಣೆಗೆ ಹೋಗಿದ್ದಾಗ ಸಹಿ ಮಾಡಿರುತ್ತೇನೆ. ನಿಪಿ-7ರ ವಿಚಾರ ಗೊತ್ತಿಲ್ಲ. ಅದರಲ್ಲಿರುವ ವಿಚಾರ ತಾನು ಓದಲಿಲ್ಲ, ತನಗೆ ಯಾವುದೇ ವ್ಯಕ್ತಿಗಳನ್ನು ಠಾಣೆಯಲ್ಲಿ ತೋರಿಸಲಿಲ್ಲ. ತಾನು ಆರೋಪಿಗಳನ್ನು ನೋಡಿಲ್ಲ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

**18.** ಚಾಸಾ.11 ಬಸವರಾಜಪ್ಪ ರವರನ್ನು ಪ್ರಾಸಾ.7 ಎಂದು ವಿಚಾರಣೆ ಮಾಡಿದ್ದು, ಅವರು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣೆಯಲ್ಲಿ, ಅಸಾ-1 ತನ್ನ ಮಾವ. ಪೋಲೀಸರು ತನ್ನನ್ನು ಚೇಳೂರು ಠಾಣೆಗೆ ಕರೆಸಿಲ್ಲ. ತನ್ನ ಹೇಳಿಕೆ ಪಡೆದಿಲ್ಲ. ತನಗೆ ಯಾವುದೇ ವ್ಯಕ್ತಿಗಳನ್ನು ತೋರಿಸಿಲ್ಲ. ಪೋಲೀಸರು ತನಗೆ ಯಾವುದೇ ವಿಚಾರವನ್ನು ತಿಳಿಸಿಲ್ಲ. ಸಾಕ್ಷಿಗೆ ನಿಪಿ-2 ರಲ್ಲಿರುವ ರುಜು ತೋರಿಸಲಾಗಿ ತನ್ನದೆಂದು ಒಪ್ಪಿಕೊಂಡಿದ್ದರಿಂದ ಸಾಕ್ಷಿ ರುಜುವನ್ನು ನಿಪಿ-2(ಬಿ) ಎಂದು ಗುರುತಿಸಲಾಗಿರುತ್ತದೆ. ಸದರಿ ರುಜುವನ್ನು ಹೊಳಲ್ಕೆರೆ ಠಾಣೆಯಲ್ಲಿ ಸಹಿ ಮಾಡು ಎಂದಿದ್ದರಿಂದ ಮಾಡಿರುತ್ತೇನೆ. ಠಾಣೆಯಲ್ಲಿ ತನ್ನ ಮಾವನವರ ಚೈನು, ಉಂಗುರ, ಕಾರನ್ನು ಕಿತ್ತುಕೊಂಡು ಹೋದ ಬಗ್ಗೆ ಸಹಿ ಮಾಡಿರುತ್ತೇನೆ. ನಿಪಿ-2ರಲ್ಲಿರುವ ವಿಚಾರ ಗೊತ್ತಿಲ್ಲ. ತಾನು ಆರೋಪಿಗಳನ್ನು ನೋಡಿಲ್ಲ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

**19.** ಚಾಸಾ.16 ಪ್ರಕಾಶ್ ಶೆಟ್ಟಿ ರವರನ್ನು ಪ್ರಾಸಾ.8 ಎಂದು ವಿಚಾರಣೆ ಮಾಡಿದ್ದು, ಅವರು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣೆಯಲ್ಲಿ, ತಾನು 2006-2007ರವರೆಗೆ ಯಶವಂತಪುರ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸಿದ್ದೇನೆ. ಈ ಪ್ರಕರಣದಲ್ಲಿ ತನ್ನನ್ನು ಹಾಗೂ ಇತರ ಸಿಬ್ಬಂದಿಗಳನ್ನು ಮಾನ್ಯ ಪಿ.ಎಸ್.ಐ. ರವರು ಆರೋಪಿಗಳ ಪತ್ತೆಗಾಗಿ ನೇಮಿಸಿದ್ದು, ಅದರಂತೆ ತಾವು ಕರ್ತವ್ಯ ನಿರ್ವಹಿಸುತ್ತಿದ್ದಾಗ ಜೆ.ಪಿ. ನಗರ ಮೈನ್ ಗೇಟ್ ಗಸ್ತು ಮಾಡುತ್ತಿರುವಾಗ ಇಬ್ಬರು ಆಸಾಮಿಗಳು 2 ಬೈಕುಗಳನ್ನು ನಿಲ್ಲಿಸಿ ಮಾತನಾಡುತ್ತಾ ನಿಂತಿದ್ದರು. ತಮಗೆ ಬಂದ ವರ್ತಮಾನವನ್ನು

ಖಚಿತಪಡಿಸಿಕೊಳ್ಳಲು ಪಂಚರನ್ನು ಬರಮಾಡಿಕೊಂಡು ಆ ವ್ಯಕ್ತಿಗಳನ್ನು ಮತನಾಡಿಸಿದಾಗ ಅವರು ಸಮಂಜಸ ಉತ್ತರ ಕೊಡಲಿಲ್ಲ. ನಂತರ ಅವರನ್ನು ಕರೆದುಕೊಂಡು ಠಾಣೆಗೆ ಹೋದೆವು. ಅವರ ಹೆಸರನ್ನು ಕೇಳಿದಾ ಎಂ.ವಿ. ಕುಮಾರ ಮತ್ತು ಹರೀಶ್‌ಬಾಬು ಎಂದು ತಿಳಿಸಿದರು. ನಂತರ ಅವರನ್ನು ಹಾಗೂ ಅವರ ಬಳಿ ಇದ್ದ ಬೈಕುಗಳನ್ನು ಪಿ.ಎಸ್.ಐ ಅವರ ಬಳಿ ಹಾಜರುಮಾಡಿದೆವು. ಒಂದು ಬೈಕಿಗೆ ನಂಬರ್ ಇರಲಿಲ್ಲ ಮತ್ತೊಂದು ಬೈಕಿನ ನಂ. ಕೆ.ಎ.16/7700 ಆಗಿತ್ತು. ಆ ದಿನ ತಾವು ಹಿಡಿದ ವ್ಯಕ್ತಿಗಳನ್ನು ಹಾಗೂ ಬೈಕುಗಳನ್ನು ಪುನಃ ತಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

**20.** ಚಾಸಾ.14 ಡಿ. ಅಶ್ವತ್ಥನಾರಾಯಣರಾವ್ ರವರನ್ನು ಪ್ರಾಸಾ.9 ಎಂದು ವಿಚಾರಣೆ ಮಾಡಿದ್ದು, ಅವರು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣೆಯಲ್ಲಿ, ದಿಃ 10-11-2006 ರಂದು ಗುಬ್ಬಿಯ ವೃತ್ತನಿರೀಕ್ಷಕರು ಒಂದು ಮನವಿಯನ್ನು ಸಲ್ಲಿಸಿ, ಕುಮಾರ, ನವೀನ ಹಾಗೂ ಹರೀಶಬಾಬು ರವರ ಗುರುತುಹಚ್ಚುವ ಕವಾಯತನ್ನು ನಡೆಸಿಕೊಡಬೇಕು ಎಂದು ಕೋರಿರುತ್ತಾರೆ. ಅದರಂತೆ ಅದೇ ದಿನ ಸಂಜೆ ಸುಮಾರು 5 ಗಂಟೆಯ ಸುಮಿಯದಲ್ಲಿ ಪಿರಾದುದಾರರಾದ ಬಸವಲಿಂಗಪ್ಪನವರ ಸಮಕ್ಷಮ ತಮ್ಮ ಕಛೇರಿಯ ನ್ಯಾ ಯಾ ಸಂಭಾಂಗಣದಲ್ಲಿ ಗುರುತುಹಚ್ಚುವ ಕವಾಯತನ್ನು ನಡೆಸಿ, ಆ ಬಗ್ಗೆ ತನ್ನ ವರದಿಯನ್ನು ಪ್ರಶ್ನಾ ವಳಿಯಲ್ಲಿ ಭರ್ತಿಮಾಡಿ ತನಿಖಾಧಿಕಾರಿಗಳಿಗೆ ಕಳಿಸಿಕೊಟ್ಟಿರುತ್ತೇನೆ. ಸಾಕ್ಷಿಯು ಸದರಿ ಸೀಲಾಗಿರುವ ಕವರ್‌ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ತೆರೆದ ನ್ಯಾಯಾಲಯದಲ್ಲಿ ತೆರೆದು ಅವುಗಳನ್ನು ನಿಪಿ.9 ರಿಂದ 11 ಎಂದು ಗುರುತಿಸಲಾಗಿರುತ್ತದೆ. ಲಕೋಟೆಯನ್ನು ನಿಪಿ.1 (ಎ) ಯಿಂದ ನಿಪಿ.11 (ಎ) ಎಂದು ಗುರುತಿಸಲಾಗಿರುತ್ತದೆ. ತನ್ನ ವರದಿಯ ಜೊತೆ ಒಂದು ಪತ್ರವನ್ನು ಕಳುಹಿಸಿದ್ದು ಅದನ್ನು ನಿಪಿ.12 ಎಂದು ಗುರುತಿಸಲಾಗಿರುತ್ತದೆ ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.12 (ಎ) ಎಂದು ಗುರುತಿಸಲಾಗಿರುತ್ತದೆ. ಆ ದಿನ 3 ಜನ ಆರೋಪಿಗಳನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಆ ದಿನ ಕವಾಯತು ನಡೆಸುತ್ತಿದ್ದಾಗ ನ್ಯಾ ಯಾಲಯದ ಮುಂದೆ ಇರುವ ಆರೋಪಿಗಳು ಇದ್ದರು ಆದರೆ ಬಹಳ ವರ್ಷಗಳಾಗಿರುವುದರಿಂದ ಅವರ ಹೆಸರುಗಳನ್ನು ತಾನು ಹೇಳಲಾಗುವುದಿಲ್ಲ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

**21.** ಚಾಸಾ.24 ಎನ್. ರುದ್ರಮುನಿ ರವರನ್ನು ಪ್ರಾಸಾ.10 ಎಂದು ವಿಚಾರಣೆ ಮಾಡಿದ್ದು, ಅವರು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣೆಯಲ್ಲಿ, ದಿಃ07-03-2006 ರಂದು ಹೊಳಲ್ಕೆರೆ ಪಿ.ಎಸ್.ಐ. ರವರಿಂದ ಸಿ.ಆರ್. 54/2006ರ ಪ್ರಕರಣದ ಕಡತವನ್ನು ಪಡೆದುಕೊಂಡು ಪರಿಶೀಲಿಸಿ ಅದೇ ದಿನ ಆರೋಪಿಗಳ ಪತ್ತೆಗಾಗಿ ಸಿಬ್ಬಂದಿಯನ್ನು ನೇಮಿಸಿರುತ್ತೇನೆ. ಅದೇ ದಿನ ಪಿರ್ಯಾದಿ ಬಸವಲಿಂಗಪ್ಪರವರ ಮರಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ ಮತ್ತು ಸಾಕ್ಷಿದಾರರರಾದ ಚಾ.ಸಾ.2 ರವರ ಹೇಳಿಕೆಯನ್ನು

ಮಾಡಿಕೊಂಡಿರುತ್ತೇನೆ. ಪಿರ್ಯಾದಿ ಮರುಹೇಳಿಕೆಯ ಆಧಾರದ ಮೇಲೆ ದಿಃ09-03-2006ರಲ್ಲಿ ಕೃತ್ಯ ನಡೆದ ಸ್ಥಳವಾದ ಅಂಕನ ಹಳ್ಳಿ ಪಾರೆಸ್ಟ್‌ಗೆ ಹೊಂದಿರುವ ಎಂಡಿಆರ್ ರಸ್ತೆಯ ಎಡಭಾಗದಲ್ಲಿರುವ ಗೋಣಿಮರದ ಕೆಳಗೆ ಪಂಚರ ಸಮಕ್ಷಮ ಪಿರ್ಯಾದಿ ತೋರಿಸಿದ ಸ್ಥಳದಲ್ಲಿ ಕೃತ್ಯನಡೆದ ಸ್ಥಳದ ಪಂಚನಾಮೆಯನ್ನು ಮಾಡಿರುತ್ತೇನೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.13 ಎಂದು ಅದರಲ್ಲಿರುವ ಸಾಕ್ಷಿಯ ಸಿಹಿಯನ್ನು ನಿಪಿ.13 (ಎ) ಎಂದು ಗುರುತಿಸಲಾಗಿರುತ್ತದೆ. ದಿ:10.03.2006 ರಂದು ಪಿರ್ಯಾದಿಯ ಗಾಯದ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಸದರಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.6 ಎಂದು ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.6(ಬಿ) ಎಂದು ಗುರುತಿಸಲಾಗಿರುತ್ತದೆ. ದಿನಾಂಕ: 13-03-2006 ರಂದು ರಾಜ್ಯದ ಎಲ್ಲಾ ಆರ್.ಟಿ.ಓ. ರವರರಿಗೆ ಪತ್ರವನ್ನು ಬರೆದು ಈ ಪ್ರಕರಣದಲ್ಲಿ ನಾಪತ್ತೆಯಾಗಿರುವ ವಾಹನವನ್ನು ಯಾರ ಹೇಸರಿಗೂ ನೊಂದಣಿ ಮಾಡಬಾರದಾಗಿ ಮತ್ತು ನೊಂದಾವಣಿಗೆ ಬಂದರೆ ಆ ಬಗ್ಗೆ ಮಾಹಿತಿಯನ್ನು ಕೊಡುವಂತ ಪತ್ರವನ್ನು ಬರೆದಿರುತ್ತೇನೆ. ದಿ: 14.03.2006ರಂದು ಕೃತ್ಯ ನಡೆದ ಸ್ಥಳವು ಚೇಳೂರು ಠಾಣೆಯ ವ್ಯಾಪ್ತಿಗೆ ಬರುವುದರಿಂದ ಕಡತವನ್ನು ವರ್ಗಾವಣೆಮಾಡಲು ಪಿ.ಎಸ್.ಐ. ರವರಿಗೆ ಹಿಂತಿರುಗಿಸಿರುತ್ತೇನೆ. ಸಾಕ್ಷಿಯು ಸದರಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.14 ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.14(ಎ) ಎಂದು ಗುರುತಿಸಲಾಗಿರುತ್ತದೆ.

**22.** ಚಾಸಾ.25 ವೀರಣ್ಣ ರವರನ್ನು ಪ್ರಾಸಾ.11 ಎಂದು ವಿಚಾರಣೆ ಮಾಡಿದ್ದು, ಅವರು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣೆಯಲ್ಲಿ, ದಿನಾಂಕಃ05-08-2003 ರಿಂದ 24-05-2006 ರವರೆಗೆ ತಾನು ಚೇಳೂರು ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ದಿಃ22-04-2006 ರಂದು ಬೆಳಿಗ್ಗೆ 11.30 ಗಂಟೆಯಲ್ಲಿ ಹೊಳಲುಕರೆ ಠಾಣೆಯ ಸಿ.ಆರ್. 54/06 ರ ಕಡತವನ್ನು ಅಂಚೆ ಮೂಲಕ ಪಡೆದು ತಮ್ಮ ಠಾಣಾ ಮೊಕದ್ದಮೆ ನಂ.40/2006ರಲ್ಲಿ ಪ್ರಕರಣವನ್ನು ದಾಖಲು ಮಾಡಿ ನ್ಯಾಯಾಲಯಕ್ಕೆ ಪ್ರ.ವ. ವರದಿಯನ್ನು ಕಳಿಸಿರುತ್ತೇನೆ. ಸಾಕ್ಷಿಯು ಪ್ರ.ವ. ವರದಿಯನ್ನು ನಿಪಿ.15 ಎಂದು, ಅದರಲ್ಲಿರುವ ಸಹಿಯನ್ನು ನಿಪಿ.15(ಎ) ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ನಿಪಿ.14ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.14(ಬಿ) ಎಂದು ಗುರುತಿಸಲಾಗಿರುತ್ತದೆ. ಪ್ರಕರಣವು ಘೋರ ಅಪರಾಧವಾದರಿಂದ ಮುಂದಿನ ತನಿಖೆಯನ್ನು ಚಾಸಾ.28 ರವರಿಗೆ ವಹಿಸಿರುತ್ತೇನೆ ಎಂಬುದಾಗಿ ಸಾಕ್ಷ್ಯ ನುಡಿದಿರತ್ತಾರೆ.

**23.** ಚಾಸಾ.23 ಆರ್. ವಸಂತ ಕುಮಾರ್ ರವರನ್ನು ಪ್ರಾಸಾ.12 ಎಂದು ವಿಚಾರಣೆ ಮಾಡಿದ್ದು, ಅವರು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣೆಯಲ್ಲಿ, ಜೂನ್ 2005 ರಿಂದ ಸೆಪ್ಟೆಂಬರ್ 2006 ರ ವರೆಗೆ

ಹೊಳಲ್ಕೆರೆ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ದಿ:04-03-2006 ರಂದು ಮಧ್ಯಾಹ್ನ 2.30 ರ ಸಮಯದಲ್ಲಿ ಠಾಣಾ ಪ್ರಭಾರದಲ್ಲಿರುವಾಗ ಪಿರ್ಯಾದಿ ಬಸವಲಿಂಗಪ್ಪ ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಗುನ್ಹಾ ನಂ : 54/2006 ರ 394 ಐ.ಪಿ.ಸಿ. ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿ ಪ್ರ.ವ. ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿಯು ಪ್ರ.ವ. ವರದಿಯನ್ನು ಯತಾ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.16 ಅದರಲ್ಲಿರುವ ಸಾಕ್ಷಿ ಸಹಿಯನ್ನು 16(ಎ) ಎಂದು ಗುರುತಿಸಲಾಗಿರುತ್ತದೆ. ಅದೇ ದಿವಸ ಈ ಪ್ರಕರಣವನ್ನು ಮುಂದಿನ ತನಿಖೆಗಾಗಿ ಪಿ.ಐ. ರವರಿಗೆ ವಹಿಸಿರುತ್ತೇನೆ ಎಂಬುದಾಗಿ ಸಾಕ್ಷ್ಯ ನುಡಿದಿರತ್ತಾರೆ.

**24.** ಚಾಸಾ.20 ವಿಜಯಕುಮಾರ್ ರವರನ್ನು ಪ್ರಾಸಾ.13 ಎಂದು ವಿಚಾರಣೆ ಮಾಡಿದ್ದು, ಅವರು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣೆಯಲ್ಲಿ, ದಿ:22.04.2006 ರಂದು ಈ ಪ್ರಕರಣದ ಕಡತವನ್ನು ಪಿ.ಎಸ್.ಐ. ಚೇಳೂರು ಇವರಿಂದ ಪಡೆದುಕೊಂಡು ಕಡತವನ್ನು ಪರಿಶೀಲಿಸಿರುತ್ತೇನೆ. ಅದೇ ದಿನ ಕೃತ್ಯನಡೆದ ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲಿಸಿರುತ್ತೇನೆ. ನಂತರ ಚೇಳೂರು ಠಾಣಾ ಸಿಬ್ಬಂದಿಯನ್ನು ಆರೋಪಿಗಳ ಪತ್ತೆಗಾಗಿ ನೇಮಾಕ ಮಾಡಿರುತ್ತೇನೆ. ದಿ:03-11-2006 ರಂದು ಯಶವಂತಪುರ ಪೋಲೀಸ್ ಠಾಣೆ ಬೆಂಗಳೂರು ನಗರ ಇವರಿಂದ ಬಂದ ಮಾಹಿತಿಯಂತೆ ಈ ಪ್ರಕರಣದ ಆರೋಪಿಗಳಾದ ಕುಮಾರ್, ಹರೀಶ್ ಬಾಬು, ನವೀನ್ ಇವರುಗಳನ್ನು ದಸ್ತುಗಿರಿಮಾಡಲು ನ್ಯಾಯಾಲಯದಿಂದ ಬಾಡಿವಾರೆಂಟ್ ಪಡೆದಿರುತ್ತೇನೆ. ದಿಃ03-11-2006 ರಂದು ಸದರಿ ಆರೋಪಿತರನ್ನು ಹಾಜರುಪಡಿಸಲು ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ಆರೋಪಿಗಳನ್ನು ಬಾಡಿವಾರೆಂಟ್ ಮೇಲೆ ದಿ:10-11-2006ರಂದು ಮಾನ್ಯ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಒಂದು ದಿನ ಪೋಲೀಸಸ್ ಕಸ್ಟಡಿಗೆ ತೆಗೆದುಕೊಂಡಿರುತ್ತೇವೆ. ಅದೇ ದಿನ ಆರೋಪಿಗಳ ಸ್ವಯಿಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೆನೆ. ಸಾಕ್ಷಿಯು ಸದರಿ ಸ್ವಯಿಚಾವ ಹೇಳಿಕೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.17 ರಿಂದ 19 ಎಂದು, ಸಾಕ್ಷಿಯ ಸಹಿಯನ್ನು ನಿಪಿ 17(ಎ) ಯಿಂದ ನಿಪಿ 19(ಎ) ಎಂದು ಆರೋಪಿತರ ಸಹಿಯನ್ನು ನಿಪಿ 17 (ಬಿ) ಯಿಂದ 19 (ಬಿ) ಎಂದು ಗುರುತಿಸಲಾಗಿರುತ್ತದೆ. ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ್ದ ಚಾಕುವನ್ನು, ಕೃತ್ಯ ಎಸಗಿದ ಸ್ಥಳದಿಂದ ಸ್ವಲ್ಪದೂರದಲ್ಲಿ ಬಿಸಾಡಿರುವುದಾಗಿ ಹೇಳಿಕೆಯಲ್ಲಿ ಹೇಳಿರುತ್ತಾರೆ. ಅದೇ ದಿನ ತಾಸೀಲ್ದಾರರವರಿಗೆ ಆರೋಪಿಗಳನ್ನು ಗುರುತಿಸುವ ಬಗ್ಗೆ ಗುರುತು ವಾಯುತುಗೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ದಿಃ11-11-2006ರಂದು ಆರೋಪಿಗಳು ಹಾಗೂ ಪಂಚರು ಮತ್ತು ಸಿಬ್ಬಂದಿಗಳೊಂದಿಗೆ ಆರೋಪಿಗಳು ತೋರಿಸಿದ ಸ್ಥಳಕ್ಕೆ ಹೋಗಿ ಹರೀಶ್ ಬಾಬು ಎಂಬ ಆರೋಪಿ ಮುಂದೆ ಹೋಗಿ ಇದೇ ಸ್ಥಳದಲ್ಲಿ ಕೃತ್ಯ ನಡೆದಿರುವುದು ಎಂದು ತೋರಿಸಿ ಕೃತ್ಯ ನಡೆದ ಸ್ಥಳದಿಂದ ಸುಮಾರು 15 ಅಡಿ ದೂರದಲ್ಲಿ ಒಂದು ಪೊದೆಯಿಂದ ಕೃತ್ಯಕ್ಕೆ ಉಪಯೋಗಿಸಿದ್ದ ಚಾಕುವನ್ನು ತೆಗೆದು ಹಾಜರುಪಡಿಸಿದ್ದು ಅದನ್ನು ಪಂಚರ ಸಮಕ್ಷಮ ಅಮಾನತ್ತು ಪಂಚನಾಮೆಯನ್ನು ನಿಪಿ.2 ರಂತೆ ಮಾರುತ್ತೇನೆ. ಸಾಕ್ಷಿಯು

ನಿಪಿ.2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2(ಸಿ) ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಚಾಕನ್ನು ನೋಡಿ ಗುರುತಿಸಿದ್ದು ಅದನ್ನು ಎಂ.ಒ.4 ಎಂದು ಗುರುತಿಸಲಾಗಿರುತ್ತದೆ. ಆನಂತರ ಠಾಣೆಗೆ ಬಂದು ಆರೋಪಿಗಳನ್ನು ಹಾಜರುಪಡಿಸಿರುತ್ತೇನೆ. ನಂತರ ಹಾಜರುಪಡಿಸಿಕೊಂಡ ಚಾಕುವಿನ ಬಗ್ಗೆ ಸ್ವತ್ತು ಪಟ್ಟಿಯನ್ನು ತಯಾರು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ.11 ಮತ್ತು 12 ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. ದಿನಾಂಕ:20-11-2006 ರಂದು ಪ್ರಕರಣದ ತನಿಖೆಯನ್ನು ಮುಕ್ತಾಯಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ದಿನಾಂಕ:21-11-2006 ರಂದು ಯಶವಂತಪುರ ಠಾಣೆಯವರಿಂದ ಬಂದಂತಹ ದಾಖಲೆಗಳನ್ನು ಪರಿಶೀಲಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಿನಾಂಕಃ22-02-2007 ರಂದು ಗುಬ್ಬಿ ತಹಸೀಲ್ದಾರ್ ರವರು ಕಳುಹಿಸಿಕೊಟ್ಟ ಗುರುತುಕವಾಯತು ವರದಿಯನ್ನು ಮನವಿಯೊಂದಿಗೆ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮತ್ತು 3 ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

**25.** ಅಭಿಯೋಜನೆಯವರು ಹಾಜರುಪಡಿಸಿರುವ ಮೌಖಿಕ ಹಾಗೂ ದಸ್ತಾವೇಜು ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಚಾಸಾ.5/ಪ್ರಾಸಾ.3 ರವರು ತನ್ನ ಮುಖ್ಯ ವಿಚಾರಣೆಯಲ್ಲಿ 2ನೇ ಆರೋಪಿಯು ತನಗೆ ಹಣ ಬೇಕು ಎಂದು ಹೇಳಿ 2006ರಲ್ಲಿ 3 ಉಂಗುರಗಳು ಮತ್ತು ಕೊರಳ ಚೈನ್ ಅನ್ನು ತನಗೆ ಮಾರಾಟ ಮಾಡಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅವರು ತನ್ನ ಪಾಟೀ ಸವಾಲಿನಲ್ಲಿ 2ನೇ ಆರೋಪಿಯು ತನಗೆ ಒಡವೆಗಳನ್ನು ಮಾರಾಟ ಮಾಡಿದ ಬಗ್ಗೆ ತಾನು ಯಾವುದೇ ದಾಖಲೆಗಳನ್ನು ಪೊಲೀಸರಿಗೆ ನೀಡಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಆ ರೀತಿ 2ನೇ ಆರೋಪಿಯು ಚಾಸಾ.5 ರವರಿಗೆ ಮೂರು ಉಂಗುರಗಳನ್ನು ಮತ್ತು ಚೈನನ್ನು ಮಾರಾಟ ಮಾಡಿದ್ದರೆ ಯಾವ ಉದ್ದೇಶಕ್ಕೆ ಯಾವುದೇ ದಾಖಲಾತಿಯನ್ನು 2ನೇ ಆರೋಪಿಯಿಂದ ಚಾಸಾ.5 ರವರು ಪಡೆದುಕೊಂಡಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಚಾಸಾ.1 ರವರು ದೂರನ್ನು ನೀಡಿದಾಗ ಆರೋಪಿತರು ಚಿಕ್ಕ ಚಾಕುವಿನಿಂದ ಹೊಟ್ಟೆಗೆ ಕೈಗೆ ತಿಳಿದಿರುತ್ತಾರೆ ಎಂದು ದೂರಿನಲ್ಲಿ ಹೇಳಿದ್ದು ತನ್ನ ಸಾಕ್ಷಿ ವಿಚಾರಣೆಯಲ್ಲಿ ಚಾಕುವಿನಿಂದ ಆರೋಪಿತರು ತಿವಿದ ಬಗ್ಗೆ ಯಾವುದೇ ಸಾಕ್ಷ್ಯ ನುಡಿದಿರುವುದಿಲ್ಲ. ಈ ಪ್ರಕರಣದಲ್ಲಿನ ಚಾಸಾ.2/ಪ್ರಾಸಾ.2, ಚಾಸಾ.10/ಪ್ರಾಸಾ.6, ಚಾಸಾ.11/ಪ್ರಾಸಾ.7 ರವರು ಅಭಿಯೋಜನಾ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಅವರುಗಳನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಅಭಿಯೋಜನ ಪಕ್ಷದವರು ಪಾಟೀ ಸವಾಲು ಮಾಡಿದಾಗಲೂ ಕೂಡ ಅವರುಗಳು ಅಭಿಯೋಜನ ಪ್ರಕರಣಕ್ಕೆ ಪೂರಕವಾದ ಯಾವುದೇ ಸಾಕ್ಷ್ಯ ನುಡಿದಿರುವುದಿಲ್ಲ. ಈ ಪ್ರಕರಣದಲ್ಲಿ ಚಾಸಾ.1, ವೈದ್ಯಾಧಿಕಾರಿಗಳು ಮತ್ತು ಆರಕ್ಷಕ ಸಾಕ್ಷಿದಾರರನ್ನು ಹೊರತುಪಡಿಸಿ ಬೇರೆ ಯಾವುದೇ ಸ್ವತಂತ್ರ ಸಾಕ್ಷಿದಾರರು ಅಭಿಯೋಜನಾ ಪ್ರಕರಣಕ್ಕೆ ಪೂರಕವಾದ ಸಾಕ್ಷ್ಯ

ನುಡಿದಿರುವುದಿಲ್ಲ. ಪ್ರತ್ಯಕ್ಷ ಸಾಕ್ಷಿದಾರರ ಕೊರತೆ ಎದ್ದು ಕಾಣುತ್ತಿದೆ. ಈ ಪ್ರಕರಣದಲ್ಲಿ ವಿಚಾರಣೆ ಮಾಡಿರುವ ಸಾಕ್ಷಿದಾರರ ಸಾಕ್ಷ್ಯವು ಒಂದಕ್ಕೊಂದು ಪೂರಕವಾಗಿರುವುದಿಲ್ಲ ಮತ್ತು ಸಾಕಷ್ಟು ಭಿನ್ನತೆಯಿಂದ ಕೂಡಿರುತ್ತದೆ. ಆರೋಪಿಯ ವಿರುದ್ಧ ಆಪಾದಿಸಲಾಗಿರುವ ಆಪಾದನೆಯನ್ನು ನಿಸ್ಸಂಶಯವಾಗಿ ರುಜುವಾತು ಪಡಿಸಲು ಅಭಿಯೋಜನಾ ಪಕ್ಷದವರು ವಿಫಲರಾಗಿರುತ್ತಾರೆ ಮತ್ತು ಆರೋಪಿತನು ಆಪಾದಿತ ಕೃತ್ಯ ಎಸಗಿದ್ದಾನೆಂದು ರುಜುವಾತು ಪಡಿಸಲು ಬೇಕಾದ ಸ್ಪಷ್ಟ ಸಾಕ್ಷ್ಯಧಾರಗಳು ಲಭ್ಯವಿರುವುದಿಲ್ಲ ಆದ್ದರಿಂದ ಅಂಶ 1ನ್ನು **ನಕರಾತ್ಮಕವಾಗಿ** ಉತ್ತರಿಸಲಾಯಿತು.

**26**. **ಅಂಶ 2** :- ಮೇಲ್ಕಂಡ ಅಂಶ 1 ರಲ್ಲಿ ಚರ್ಚಿಸಿರುವ ಕಾರಣಗಳಿಗಾಗಿ ಅಭಿಯೋಜನಾ ಪಕ್ಷದವರು ತಮ್ಮ ಪ್ರಕರಣವನ್ನು ರುಜುವಾತುಪಡಿಸಲು ವಿಫಲರಾದ ಕಾರಣ ಈ ಕೆಳಕಂಡಂತೆ ಆದೇಶಿಸಲಾಗಿದೆ:

## ಆದೇಶ

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 248(1)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, 2ನೇ ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ 394 ಸಹವಾಚಕ ಕಲಂ 34 ರ ಆಪಾದನೆಗಳಿಗಾಗಿ ಆರೋಪಿಯನ್ನು ನಿರ್ದೋಷಿಯೆಂದು ನಿರ್ಣಯಿಸಿ ಖುಲಾಸೆಗೊಳಿಸಲಾಗಿದೆ.

ಆರೋಪಿ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನಿನ ಬಾಂಡು ಮತ್ತು ಮುಚ್ಚಳಿಕೆಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 437 (ಎ) ರಡಿಯಲ್ಲಿ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.

ಮು.ಮಾ.1 ಮೂರು ಬಂಗಾರದ ಉಂಗುರಗಳು, ಮು.ಮಾ-2 ಒಂದು ಚಿನ್ನದ ಕೊರಳ ಚೈನ್, ಮು.ಮಾ-3 ಓಮಿನಿ ವಾಹನ ಈಗಾಗಲೇ ಪಿರ್ಯಾದಿದಾರರ ವಶಕ್ಕೆ ನೀಡಲಾಗಿರುತ್ತದೆ ಮತ್ತು ಮು.ಮಾ-4 ಚಾಕು ಉಪಯುಕ್ತ ವಸ್ತುವಾಗಿರುವುದರಿಂದ ಅಪೀಲು ಅವಧಿ ಮುಗಿದ ನಂತರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾರ್ತಿಗೆ ಉಕ್ತಲೇಖನ ನೀಡಿ, ಅವರು ಲಿಪ್ಯಂತರಿಸಿ, ಗಣಕೀಕೃತವಾದ ನಂತರ ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ **6**ನೇ ಆಗಸ್ಟ್ **2026** ರಂದು ಘೋಷಿಸಲಾಯಿತು)

ಸಹಿ/-
(ಶ್ರೀ ಕಿರಣ್ ಎಸ್.ಪಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಗುಬ್ಬಿ.

## ಅನುಸೂಚಿ:

**ಅಭಿಯೋಜನೆಯಪರ ಸಿ.ಸಿ. 709/2014 ಪ್ರಕರಣದಲ್ಲಿ ವಿಚಾರಣೆಗೊಳಪಟ್ಟ ಸಾಕ್ಷಿ ದಾರರ ಪಟ್ಟಿ**

| | | |
|---|---|---|
| ಪ್ರಾ.ಸಾ.1 | : | ಪ್ರದೀಶ್ |
| ಪ್ರಾ.ಸಾ.2 | : | ಡಾ. ಆರ್. ತಿಪ್ಪೇಶಿ |
| ಪ್ರಾ.ಸಾ.3 | : | ಚನ್ನಬಸವಯ್ಯ |
| ಪ್ರಾ.ಸಾ.4 | : | ನಾರಾಯಣ್ ಲಾಲ್ |

**ಅಭಿಯೋಜನೆಯಪರ ಸಿ.ಸಿ. 709/2014 ಪ್ರಕರಣದಲ್ಲಿ ಗುರುತಿಸಿಕೊಂಡ ದಾಖಲಾತಿಗಳ ಪಟ್ಟಿ**

| | | |
|---|---|---|
| ನಿ.ಪಿ.1 | : | ಹೇಳಿಕೆ |
| ನಿ.ಪಿ.2 | : | ಗಾಯದ ಪ್ರಮಾಣ ಪತ್ರ |

**ಅಭಿಯೋಜನೆಯಪರ ಸಿ.ಸಿ. 257/2007 ಪ್ರಕರಣದಲ್ಲಿ ವಿಚಾರಣೆಗೊಳಪಟ್ಟ ಸಾಕ್ಷಿ ದಾರರ ಪಟ್ಟಿ**

| | | |
|---|---|---|
| ಪ್ರಾ.ಸಾ.1 | : | ಜೆ.ಸಿ. ಬಸವಲಿಂಗಪ್ಪ |
| ಪ್ರಾ.ಸಾ.2 | : | ಪ್ರದೀಶ್ |
| ಪ್ರಾ.ಸಾ.3 | : | ಅರ್ಜುನ್ ಸಿಂಗ್ |
| ಪ್ರಾ.ಸಾ.4 | : | ಚನ್ನಬಸವಯ್ಯ |
| ಪ್ರಾ.ಸಾ.5 | : | ಡಾ. ಆರ್. ತಿಪ್ಪೇಶಿ |
| ಪ್ರಾ.ಸಾ.6 | : | ವೇಣುಗೋಪಾಲ |
| ಪ್ರಾ.ಸಾ.7 | : | ಬಸವರಾಜಪ್ಪ |
| ಪ್ರಾ.ಸಾ.8 | : | ಹೆಚ್.ಆರ್. ಪ್ರಕಾಶ್ ಜೆಟ್ಟಿ |
| ಪ್ರಾ.ಸಾ.9 | : | ಡಿ. ಅಶ್ವತ್ಥನಾರಾಯಣರಾವ್ |
| ಪ್ರಾ.ಸಾ.10 | : | ಎನ್. ರುದ್ರಮುನಿ |
| ಪ್ರಾ.ಸಾ.11 | : | ವೀರಣ್ಣ |
| ಪ್ರಾ.ಸಾ.12 | : | ಆರ್. ವಸಂತ ಕುಮಾರ್ |
| ಪ್ರಾ.ಸಾ.13 | : | ಬಿ. ವಿಜಯಕುಮಾರ್ |

**ಅಭಿಯೋಜನೆಯಪರ ಸಿ.ಸಿ. 257/2007 ಪ್ರಕರಣದಲ್ಲಿ ಗುರುತಿಸಿಕೊಂಡ ದಾಖಲಾತಿಗಳ ಪಟ್ಟಿ**

| | | |
|---|---|---|
| ನಿ.ಪಿ 1 | : | ದೂರು |
| ನಿ.ಪಿ 2 | : | ಮಹಜರ್ |
| ನಿ.ಪಿ 3 | : | ಹೇಳಿಕೆ |
| ನಿ.ಪಿ 4 ಮತ್ತು 5 | : | ಅಮಾನತ್ತು ಮಹಜರ್ |
| ನಿ.ಪಿ 6 | : | ಗಾಯದ ಪ್ರಮಾಣ ಪತ್ರ |
| ನಿ.ಪಿ 7 | : | ಅಮಾನತ್ತು ಪಂಚನಾಮೆ |
| ನಿ.ಪಿ 8 | : | ಹೇಳಿಕೆ |
| ನಿ.ಪಿ 9 ರಿಂದ 11 | : | ಪತ್ರ |
| ನಿ.ಪಿ 12 | : | ಪತ್ರ |

| | | |
|---|---|---|
| ನಿ.ಪಿ **13** | : | ಸ್ಥಳ ಪಂಚನಾಮೆ |
| ನಿ.ಪಿ **14** | : | ಪತ್ರ |
| ನಿ.ಪಿ **15** | : | ಪ್ರ.ವ. ವರದಿ |
| ನಿ.ಪಿ **16** | : | ಪ್ರ.ವ. ವರದಿಯ ಧೃಢಿಕೃತ ನಕಲು |
| ನಿ.ಪಿ **17** ರಿಂದ **19** | : | ಆರೋಪಿಯ ಸ್ವ-ಇಚ್ಛಾ ಹೇಳಿಕೆ |

**ಆರೋಪಿಗಳ ಪರ ವಿಚಾರಣೆಗೊಳಪಟ್ಟ ಸಾಕ್ಷಿ ದಾರರ ಪಟ್ಟಿ**

--ಇಲ್ಲ--

**ಆರೋಪಿಗಳ ಪರ ಗುರುತಿಸಿಕೊಂಡ ದಾಖಲಾತಿಗಳ ಪಟ್ಟಿ**

--ಇಲ್ಲ--

**ಅಭಿಯೋಜನೆಯಪರ ಸಿ.ಸಿ. 257/2007 ಪ್ರಕರಣದಲ್ಲಿ ಗುರುತಿಸಿಕೊಂಡ ಮುದ್ದೆ ಮಾಲುಗಳ ಪಟ್ಟಿ**

| | | |
|---|---|---|
| ಮು.ಮಾ.**1** | : | ಮೂರು ಉಂಗುರಗಳು |
| ಮು.ಮಾ.**2** | : | ಬಂಗಾರದ ಕೊರಳ ಚೈನ್ |
| ಮು.ಮಾ.**3** | : | ಓಮಿನಿ ಕಾರು |
| ಮು.ಮಾ.**4** | : | ಚಾಕು |

ಸಹಿ/-

**(ಶ್ರೀ ಕಿರಣ್ ಎಸ್.ಪಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಗುಬ್ಬಿ**